Code of Conduct for the Ministers

612. Sri D. B. KALMANKAR (Afzalpur).

Will the Chief Minister be pleased to state :—

whether the Government has prepared a Code of Conduct for the Ministers ; if so, the salient features of the same ?

Sri D. DEVARAJ URS (Chief Minister).—

The question of adopting a Code of Conduct for the Ministers is under the consideration of the Government,

Sri D. B. KALMANKAR.—I had asked whether the Government has prepared a Code of Conduct. But the reply given here reads as "the question of adopting a Code of Conduct for Ministers is under the consideration of the Government". May I know whether any Code of Conduct is prepared for the Ministers ?

†Sri D. DEVARAJ URS.—It is still under consideration stage. Till it is adopted, it is supposed to be under consideration.

ಶ್ರೀ ಬಾಪೂಗೌಡ ರಾಯಪ್ಪ.—ಕೋಡ್ ಆಫ್ ಕಾಂಡಕ್ಟ್ ಕನ್ಸಿಡರೇಷನ್‌ಲ್ಲಿ ಇದೆ ಎಂದು ತಾವು ಹೇಳಿದಿರಿ, ಮಂತಿ ಗಳಿಗೆ ಕೋಡ್ ಆಫ್ ಕಾಂಡಕ್ಟ್ ಇರಬೇಕು ಎನ್ನುವ ಅವಶ್ಯಕತೆ ಮುಖ್ಯ ಮಂತ್ರಿಗಳ ಮನಸ್ಸಿನಲ್ಲಿ ಏತಕ್ಕೆ ಬಂತು? ಕಾರಣ ಏನು?

ಶ್ರೀ ಡಿ. ದೇವರಾಜ್ ಅರಸ್.—ತಪ್ಪು ಎಂದು ನಿಮ್ಮ ಮನಸ್ಸಿಗೆ ಏತಕ್ಕೆ ಬಂತು?

ಶ್ರೀ ಕೋಣಂದೂರು ಲಿಂಗಪ್ಪ.—ಮಂತ್ರಿಗಳಿಗೆ ಸಂಬಂಧಪಟ್ಟ ಆಚಾರಸಂಹಿತೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಮಂತ್ರಿಗಳ ಬಗ್ಗೆ ಆಚಾರಸಂಹಿತೆ ಅವಶ್ಯಕ ಇದೆ ಎನ್ನುವುದನ್ನು ತಾವು ಖಚಿತವಾಗಿ ಒಪ್ಪಿಕೊಂಡ ಹಾಗೆ ಅಲ್ಲವೇ?

ಶ್ರೀ ಡಿ. ದೇವರಾಜ್ ಅರಸ್.—ಎಲ್ಲರಿಗೂ ಇದೆ, ಮಂತ್ರಿಗಳಿಗೂ ಇದೆ, ಮಾನ್ಯ ಸದಸ್ಯರಿಗೂ ಇವೆ. ಈ ಸಭೆಯವರು ಅದನ್ನು ತಾರದಿದ್ದರೆ, ನನ್ನದೂ ಏನೂ ಆಕ್ಷೇಪಣೆ ಇಲ್ಲ, ತರಬೇಕು ಎಂದು ಹೇಳುತ್ತಾ ಇಲ್ಲ, ನಮ್ಮ ಮೇಲೆ ಸ್ವಲ್ಪ ನಿರ್ಬಂದ ಇಟ್ಟುಕೊಳ್ಳೋಣ ಎಂದು ತಂದಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ತಾವು ಮಂತ್ರಿಗಳಿಗೆ ಸಂಬಂಧಪಟ್ಟ ಆಚಾರ ಸಂಹಿತೆ ಪರಿಶೀಲನೆಯಲ್ಲಿದೆ ಎಂದು ಹೇಳಿದಿರಿ, ಇದು ಪತ್ರಿಕೆಗಳಲ್ಲಿ ವರದಿಯಾಗಿದೆ, ಆಚಾರ ಸಂಹಿತೆಯ ಬಗ್ಗೆ 31 ಸೂಚನೆಗಳನ್ನು ಕೊಟ್ಟು, ಒಂದು ಸುತ್ತೋಲೆಯನ್ನು ಮಂತ್ರಿಗಳಿಗೆ ಕಳುಹಿಸಿದ್ದಾರೆಂದು ತಿಳಿದು ಬಂದಿದೆ, ಅದು ನಿಜವೇ? ನಿಜ ಆದರೆ, ಈ ಸಭೆಯಲ್ಲಿ ನಾವು ಏನಾದರೂ ಸೇರಿಸುವುದು ಇದ್ದರೆ, 32 ನೆಯದನ್ನು ಸೇರಿಸುತ್ತೇವೆ. ಆದ್ದರಿಂದ ಈ ಸಭೆಯಲ್ಲಿ ಅದನ್ನು ಪರಿಶೀಲನೆಗೆ ಇಡುತ್ತೀರಾ?

ಶ್ರೀ ಡಿ. ದೇವರಾಜ್ ಅರಸ್.—ಸರ್ಕಾರ ಅದನ್ನು ಅಡಾಪ್ಟ್ ಮಾಡಿದಮೇಲೆ, ತಮಗೆ ಅದರ ಒಂದು ಕಾಪಿಯನ್ನು ಕಳುಹಿಸಿಕೊಡುತ್ತೇವೆ.

Sri B. B. SAYANAK.—May I know whether there is any Code of Conduct for the Ministers in any State in India and whether there is Code of Conduct for the Central Ministers ?

Sri D. DEVARAJ URS.—The Code of Conduct is expressed and implied. We have implied Code of Conduct; it is also expressed here. It may be a kind of guideline to other States, if they have not already got it.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಹೇಳಿರುವ ಪ್ರಕಾರ ಈ ವಿಚಾರ ಸಂಹಿತೆ ತಯಾರು ಆಗಿದೆ, ಒಪ್ಪಿಕೊಳ್ಳುವುದು, ಬಿಡುವುದು ಇನ್ನೂ ಯೋಚನೆಯಲ್ಲಿದೆ ಎಂದು ಅರ್ಥ ವಾಯಿತು. ಅದು ತಯಾರು ಆಗಿರುವುದರಿಂದ ಅದರ ಮುಖ್ಯ ಅಂಶಗಳು ಏನು, ರೂಪರೇಷೆಗಳು ಏನು? ಎನ್ನುವುದು ತಮಗೆ ಗೊತ್ತಿದೆ ಎಂದು ತಿಳಿದುಕೊಂಡಿದ್ದೇವೆ. ಆದ್ದರಿಂದ, ಅದರಲ್ಲಿ ಏನು ಇದೆ ಎಂದು ಹೇಳುವುದಾದರೆ, ನಮಗೂ ಸ್ವಲ್ಪ ಅನುಕೂಲವಾಗಬಹುದು ಎಂದು ಕಾಣುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ಒಪ್ಪಿಕೊಳ್ಳುವುದು, ಬಿಡುವುದು ಎನ್ನುವ ಅನುಮಾನವಿಲ್ಲ, ಒಪ್ಪಿಕೊಳ್ಳುತ್ತೇವೆ; ನಮ್ಮ ಮಂತ್ರಿಮಂಡಲದವರು ಎಲ್ಲರೂ ಒಪ್ಪಿಕೊಳ್ಳುವವರು ಇದ್ದಾರೆ. ಏತನ್ಮಧ್ಯೆ ತಾವು ಏನಾದರೂ ಸಲಹೆಗಳಿದ್ದರೆ, ಕಳುಹಿಸಿಕೊಡಿ ಅದನ್ನು ಪರಿಶೀಲನೆ ಮಾಡೋಣ. ಎಲ್ಲಾ ಪರಿಶೀಲಿಸಿ ಒಪ್ಪಿಗೆಯಾದಮೇಲೆ ತಮ್ಮ ಮುಂದೆ ಬೇಕಾದರೆ ಇಡುತ್ತೇನೆ.

Sri D. B. KALMANKAR.—May I know how much time it will take for the Government to adopt the Code of Conduct ?

Sri D. DEVARAJ URS.—Very shortly we will finalise and adopt it.

Construction of a Bridge on Gubbi-Hebbur Road

621. Sri GATTI CHANDRASEKHAR (Gubbi).—

Will the Minister for Public Works and Electricity be pleased to state :—

(*a*) whether it has come to the notice of the Government that the hardship is being caused to travelling pub'ic for want of a bridge across left bank wasteweir of Gubbi Tank on Gubbi-Hebbur Road ;

(*b*) the reasons for not according sanction to the estimate prepared long back in this behalf so far ;

(*c*) whether the Government intend to take up and complete the construction of bridge work during this year ?

Sri H. M. CHANNABASAPPA (Minister for Public Works and Electricity).—

(*a*) Yes.

(*b*) The estimate is not prepared.

(*c*) It will be considered when the financial position improves.

ಶ್ರೀ ಗಟ್ಟಿ ಚಂದ್ರಶೇಖರ್.—ತಮ್ಮ ಉತ್ತರದಲ್ಲಿ ಸೇತುವೆಯ ಅವಶ್ಯಕತೆ ಇದೆಯೆಂದು ತಿಳಿಸಿದ್ದೀರಿ. ಮತ್ತು ಆ ಬಗ್ಗೆ, ಅಂದಾಜು ತಯಾರು ಆಗಿಲ್ಲ, ಹಣಕಾಸಿನ ಪರಿಸ್ಥಿತಿ ಉತ್ತಮ ಗೊಂಡಾಗ ಪರಿಶೀಲಿಸಲಾಗುವುದು ಎಂದು ಹೇಳಿದ್ದೀರಿ. ನಾನು ಈ ಬಗ್ಗೆ 3-4 ಪ್ರಶ್ನೆಯನ್ನೂ ಕೇಳಿದರೂ ಯಾವ ಪ್ರಶ್ನೆಗೂ ನಿರ್ದಿಷ್ಟವಾದ ಉತ್ತರ ಬಂದಿಲ್ಲ. ಮಂತ್ರಿಗಳು ಸಹ ಈ ಸೇತುವೆಯನ್ನು ನೋಡಿದ್ದಾರೆ, ಕೋಡಿ ಬಿದ್ದಾಗ ಒಂದು ಫರ್ಲಾಂಗ್ ರಸ್ತೆ, ಉದ್ದಕ್ಕೂ ಆ ಕಡೆ ಜನ ಈ ಕಡೆಗೆ ಈ ಕಡೆ ಜನ ಆ ಕಡೆಗೆ ಬರುವ ಹಾಗಿಲ್ಲ, ಯಾರಾದರೂ ಆ ಕಡೆಯವರು ನತ್ತು ಹೋದರೆ ಈ ಕಡೆಯವರು ಬಾಯಿ ಬಡಿದುಕೊಳ್ಳಬೇಕು. ಹಿಂದೆ ತಾವು ಮಂತ್ರಿಗಳಾಗಿದ್ದಾಗ ಬಂದು ನೋಡಿ ಅಲ್ಲಿ ಸೇತುವೆಯ ಅವಶ್ಯಕತೆ ಇದೆ ಎಂದು ಹೇಳಿದ್ದಿರಿ. ತಮಗೆ ಈಗ ಪುನರ್ ಜನ್ಮದೊರೆತಿದೆ, ಈ ಸಮಯದಲ್ಲಾದರೂ ಇದನ್ನು ಪರಿಶೀಲನೆ ಮಾಡಿ. ಆದಷ್ಟು ಬೇಗ ಈ ಸೇತುವೆಯನ್ನು ಮಾಡಿಸಿ ಕೊಡಿ. ಹಣಕಾಸಿನ ಪರಿಸ್ಥಿತಿ ಉತ್ತಮವಾಗುವುದು ಯಾವಾಗ ? ತಮ್ಮ ಕಾಲದಲ್ಲಿ ಮಾಡಿಸಿದರೆ ಚೆನ್ನಬಸಪ್ಪನವರ ಸೇತುವೆ ಎಂದು ಸೆಸರು ಇಡುವುದಕ್ಕೆ ನನಗೆ ಆಸೆ ಇದೆ. ಅಲ್ಲಿ ಒಂದು